ಮೂಲ ದಾವಾ ಸಂಖ್ಯೆ 10/2021

ಡಿ ಡಬ್ಲ್ಯೂ-1

**(ದಿನಾಂಕ 07.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ A.C.C. ವಕೀಲರಿಂದಃ-**

ನಮ್ಮ ಮನೆತನಕ್ಕೆ ಬೇರೆ ಆಸ್ತಿಗಳೂ ಕೂಡ ಇದೆ. ಅವು ನಮ್ಮ ತಂದೆ ಹೆಸರಿನಲ್ಲಿ 8 ರಿಂದ 10 ಎಕರೆ ಇರುತ್ತದೆ. ನನಗೆ ವಾರ್ಷಿಕ ಆದಾಯ 10 ರಿಂದ 12 ಲಕ್ಷ ರೂ ಗಳು. ನನ್ನ ಹೆಂಡತಿಗೆ 5 ಲಕ್ಷ ವಾರ್ಷಿಕ ಆದಾಯ ಇದೆ. ನಮ್ಮ ಮನೆತನದ ಆದಾಯ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರ ಎಂದರೆ ಸರಿ. ಆಸ್ತಿ ಖರೀದಿಸಿದ ಸಾಲಿನಲ್ಲಿ ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲಾ. ನನಗೆ ಆಸ್ತಿ ಖರೀದಿಸಲು ಸಾಕಷ್ಟು ಆದಾಯ ಇರಲಿಲ್ಲ ಅಂತಾ ಸೂಚಿಸುವುದು ಸರಿಯಲ್ಲ. ಪ್ರತಿವಾದಿ ನಂಬರ 1 ವತ್ತು 2 ಮತ್ತು ಕಮಲಮ್ಮನಿಗೆ ಗೊತ್ತಾಗದಂತೆ ಮೋಸ ದಿಂದ ನಾನು ಖರೀದಿ ಪತ್ರ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಐಟಂ ನಂಬರ 1 ಮತ್ತು 5 ರ ಆಸ್ತಿ ಸಂಬಂಧಿಸಿದಂತೆ ನಮ್ಮ ವಕೀಲರಾದ ಚಂದ್ರೇಗೌಡ ಮುಖಾಂತರ ನೋಟೀಸು ಕೊಡಿದ್ದೆ ಎಂದರೆ ಸರಿ. ಜಿ ನಾಗಪ್ಪ ಅಣ್ಣಪ್ಪ ನೋಟೀಸಿಗೆ ಉತ್ತರ ಕೊಟ್ಟು ಖರೀದಿ ಕರಾರು ಪತ್ರ ಬರೆದುಕೊಟ್ಟಿಲ್ಲಾ ಅಂತಾ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಉದ್ದೇಶ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ ಐಟಂ 1, 5 ಮತ್ತು 6 ಸಂಬಂಧಿಸಿದಂತೆ ಅವು ಮೂಲತಃ ಅಕ್ಕಸಾಲಿ ಈಶ್ವರಪ್ಪನ ಹೆಸರಿನಲ್ಲಿ ನಮೂದು ಇತ್ತು ಎಂದರೆ ಸರಿ. ಸದ್ಯೋಜಾತಪ್ಪ ಮತ್ತು ಕೆ ಎಸ್ ವಾಮದೇವಪ್ಪ ಮತ್ತು ಈಶ್ವರಪ್ಪ ಹೆಸರಿನ ಆಸ್ತಿಗಳು ಮೊದಲಿನಿಂದ ಈಶ್ವರಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸರಿ. ವಾಮದೇವಪ್ಪ ಮತ್ತು ವಿರುಪಾಕ್ಷಪ್ಪ ರವರಿಗೆ ಈಶ್ವರಪ್ಪಮಾರಾಟ ಮಾಡುವಾಗ ಹಕ್ಕು

ಇರಲಿಲ್ಲ ಎಂದರೆ ಸರಿಯಲ್ಲ. ಸದ್ಯೋಜಾತಪ್ಪ ವಿರುಪಾಕ್ಷಪ್ಪ ರವರಿಗೆ 2003 ರಲ್ಲಿ ಆಸ್ತಿಗಳನ್ನು ಮಾರಾಟ ಮಾಡಿದ್ದು ಈ ವಿಚಾರವಾಗಿ ಪ್ರತಿವಾದ ಪತ್ರದಲ್ಲಿ ನಮೂದಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ನಾನು ಆಸ್ತಿಗಳನ್ನು ಖರೀದಿ ಮಾಡಿದ ಆಸ್ತಿ ಅವರಿಗೆ ಆಸ್ತಿ ಮಾರಾಟ ಮಾಡಲು ಏನು ಅವಶ್ಯಕತೆ ಇತ್ತು ಅಂತಾ ಬ್ಯಾಂಕ್ ನಿಂದ ದಾಖಲೆಗಳನ್ನು ಪರಿಶೀಲಿಸುವ ಅವಶ್ಯಕತೆ ಬರಲಿಲ್ಲ. ಈಶ್ವರಪ್ಪನ ಮನೆತನದಲ್ಲಿ ಆರ್ಥಿಕವಾಗಿ ಸಬಲರಾಗಿರುವ ಕಾರಣ ಅವರಿಗೆ ಆಸ್ತಿ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಿಂದ ಸಾಕಷ್ಟು ವರಮಾನ ಇದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಹರಪನಹಳ್ಳಿ ಅಸಿಸ್ಟೆಂಟ್ ಕಮೀಶನರ್ ಆರ್ ಎ ಸಿ ಎ ಆರ್ 173/2010-11 ನಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಹೆಸರು ಹಚ್ಚಿಕೊಳ್ಳುವ ಬಗ್ಗೆ ಪ್ರಕರಣ ನಡೆದಿತ್ತು ಎಂದರೆ ಸರಿ. ಸದರಿ ಆದೇಶದ ಪ್ರಕಾರ ನ್ಯಾಯಾಲಯದಲ್ಲಿ ಹಕ್ಕುಗಳನ್ನು ಸಾಬೀತುಪಡಿಕೊಳ್ಳಿ ಅಂತಾ ಆದೇಶ ಆಗಿತ್ತು ಎಂದರೆ ಸರಿ. ನಂತರ ಈ ದಾವಾ ಹೂಡಲಾಗಿದೆ ಎಂದರೆ ಸರಿ. ವಾದಿಯರ ಹಕ್ಕುಗಳನ್ನು ನಷ್ಟಗೊಳಿಸಲು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.